ಶ್ರೀ ಬಿ.ಆರ್.ಪಾಟೀಲ್: ಟ್ರಾಫಿಕ್ ಜಾಮ್ ಆಗಿತ್ತು ಅಧ್ಯಕ್ಷರೆ,

ಅಧ್ಯಕ್ಷರು: ಮಂತ್ರಿಗಳು ಎಲ್ಲ ಹೊರಟು ಹೋಗಿ ಬಿಟ್ಟರು. ದಯಮಾಡಿ ಇನ್ನೊಂದು ಸಾರಿ ಉತ್ತರ ಕೊಡಿಸೋಣ.... ಆಯಿತು ಕೇಳಿ.

ಕರ್ನಾಟಕ ವಿಧಾನ ಸಭೆ

ಪ್ರಶ್ನೆ ಸಂಖ್ಯೆ (ಚುಕ್ಕೆ ಗುರುತಿನ)	5109
ವಿಧಾನ ಸಭೆಯ ಸದಸ್ಯರ ಹೆಸರು	ಶ್ರೀಮತಿ/ ಶ್ರೀ.ಪಾಟೀಲ್ ಬಿ.ಆರ್.(ಆಳಂದ)
ಉತ್ತರಿಸಬೇಕಾದ ದಿನಾಂಕ	13/07/2005
ಉತ್ತರಿಸಬೇಕಾದ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ.	ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲೂಕಿನಲ್ಲಿ ಕಟ್ಟುತ್ತಿರುವ ಜರ್ಮನ್ ಆಸ್ಪತ್ರೆ ಪ್ರಾರಂಭವಾಗುವುದು ಯಾವಾಗ?	ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲೂಕಿನಲ್ಲಿ ಜರ್ಮನ್ ನೆರವಿನಿಂದ ಹೊಸದಾಗಿ ನಿರ್ಮಿಸುತ್ತಿರುವ ಆಸ್ಪತ್ರೆಯು ಪೂರ್ಣಗೊಂಡು ಜನವರಿ 2006ರಲ್ಲಿ ಪ್ರಾರಂಭವಾಗುವ ನಿರೀಕ್ಷೆ ಇದೆ.
ಆ.	ಅದಕ್ಕೆ ಎಷ್ಟು ಅನುದಾನ ನೀಡಲಾಗಿದೆ?	ಇದಕ್ಕಾಗಿ ರೂ. 22.44 ಲಕ್ಷಗಳ ಅನುದಾನ (ಜರ್ಮನ್ ನೆರವು)ವನ್ನು ಕಾಯ್ದಿರಿಸಲಾಗಿದೆ.
ಇ.	ಸದ್ಯ ಅನುದಾನವಿಲ್ಲದೆ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಾಮಗಾರಿ ಗುತ್ತಿಗೆದಾರರ ವಿಳಂಬದಿಂದ ಕೆಲಕಾಲ ಸ್ಥಗಿತಗೊಂಡಿತ್ತು. ಆದರೆ ಈಗ ಪ್ರಗತಿಯಲ್ಲಿದ್ದು, ಇದುವರೆವಿಗೂ ರೂ. 111.57 ಲಕ್ಷ ಖರ್ಚಾಗಿರುತ್ತದೆ.
ಈ.	ಅದು ಪೂರ್ಣಗೊಳ್ಳುವುದು ಯಾವಾಗ?	ಆಸ್ಪತ್ರೆಯ ಎಲ್ಲಾ ಕಾಮಗಾರಿಗಳನ್ನು ಡಿಸೆಂಬರ್ 2005ರ ಅಂತ್ಯದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ

ಪ್ರಶ್ನೆ ಸಂಖ್ಯೆ 5109ಗೆ ಪೂರಕ ಟಿಪ್ಪಣಿ

ಗುಲ್ಬರ್ಗಾ ಜಿಲ್ಲೆಯ ಅಳಂದ ತಾಲೂಕಿನಲ್ಲಿ 30 ಹಾಸಿಗೆಗಳ ಸಾಮರ್ಥ್ಯವುಳ್ಳ ಹೊಸ ಸಾರ್ವಜನಿಕ ಆಸ್ಪತ್ರೆ ಕಟ್ಟಡದ ಕಾಮಗಾರಿಗಳನ್ನು ಜರ್ಮನ್ ನೆರವಿನ ಕೆ.ಎಫ್‌ಡಬ್ಲ್ಯೂ ಯೋಜನೆ ಒಂದನೇ ಹಂತದಲ್ಲಿ ಕೆ.ಎಫ್‌ಡಬ್ಲ್ಯೂ ಯೋಜನೆಯ ವಾಸ್ತುಶಿಲ್ಪಿಗಳಿಂದ ಅನುಮೋದಿಸಲ್ಪಟ್ಟಿರುವ ನಕ್ಷೆಯಂತೆ ರೂ 205.00 ಲಕ್ಷ ಅಂದಾಜಿಗೆ ಸಿದ್ಧಪಡಿಸಲಾಗಿದ್ದು, ಕೆ.ಎಫ್‌ಡಬ್ಲ್ಯೂ ಯೋಜನೆಯ ನಿಯಮಾವಳಿಯಂತೆ ಈ ಕಾಮಗಾರಿಗಳಿಗೆ ರಾಷ್ಟ್ರೀಯ ಸ್ಪರ್ಧಾತ್ಮಕ ಗುತ್ತಿಗೆ ಆಹ್ವಾನಿಸಿ ಶ್ರೀ ಅಶೋಕ ಹೆಗಡೆಯವರಿಗೆ ರೂ. 227.44 ಲಕ್ಷ ಮೊತ್ತಕ್ಕೆ ಗುತ್ತಿಗೆ ಆಧಾರದ ಮೇಲೆ 31.06.2003ರಂದು ಆದೇಶ ನೀಡಲಾಗಿತ್ತು. ಈ ಕಾಮಗಾರಿಗೆ 12 ತಿಂಗಳ ಅವಧಿಯನ್ನು ನೀಡಲಾಗಿತ್ತು. ಆದರೆ ಗುತ್ತಿಗೆದಾರರು ವಿಳಂಬ ನೀತಿಯಿಂದ ಕೆಲಸ ಪ್ರಗತಿಯು ಕುಂಠಿತಗೊಂಡಿದ್ದು, ಕೆಲಕಾಲ ಸ್ಥಗಿತಗೊಂಡಿತ್ತು. ಈಗ ಕಾಮಗಾರಿಗಳು ಪ್ರಗತಿಯಲ್ಲಿದ್ದು ಆಸ್ಪತ್ರೆ ಕಟ್ಟಡವನ್ನು ಡಿಸೆಂಬರ್ 2005ರ ಅಂತ್ಯದೊಳಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಇದುವರೆಗೂ ಈ ಕಾಮಗಾರಿ ರೂ. 111.57 ಲಕ್ಷ ವೆಚ್ಚವಾಗಿರುತ್ತದೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಜರ್ಮನ್ ಸಹಾಯದಿಂದ ಕಟ್ಟಲಾದ ಈ ಆಸ್ಪತ್ರೆ ಅವರಿಗೆ 12 ತಿಂಗಳ ಕಾಲಾವಕಾಶದಲ್ಲಿ ಈ ಕಾಮಗಾರಿ ಮುಗಿಸಬೇಕೆಂದು ಕಂಡೀಷನ್ ಮೇಲೆ ಕೊಟ್ಟಿದ್ದಾರೆ. ಆದರೆ ಸುಮಾರು ವಿಳಂಬವಾಯಿತು. ಈ ಮಧ್ಯೆ ನನಗೆ ತಿಳಿದ ಹಾಗೆ ಅವರ ಕಂಟ್ರಾಕ್ಟ್ ಕೂಡ ರದ್ದು ಮಾಡಲಾಗಿತ್ತು. ಇದು ಬೇನಾಮಿ ಕಂಟ್ರಾಕ್ಟ್, ಕಂಟ್ರಾಕ್ಟರ್ ಹೆಸರಿನ ಮೇಲೆ ಇದು ಕಂಟ್ರಾಕ್ಟ್ ಕೊಟ್ಟಿರುವುದು ಅಲ್ಲ. ಅವರು ಎಲಿಜಿಬಿಲಿಟಿ ಇಲ್ಲ ಎನ್ನುವ ಕಾರಣಕ್ಕಾಗಿ ಈ ಕಂಟ್ರಾಕ್ಟರ್ ಹೆಸರಿನ ಮೇಲೆ ಒಬ್ಬ ಪ್ರಭಾವಿ ರಾಜಕಾರಣಿ ಇದನ್ನು ಕಂಟ್ರಾಕ್ಟ್ ಹಿಡಿದು ರದ್ದು ಪಡಿಸಲಾದುದು ಮುಂದುವರೆಸುವುದಕ್ಕೆ ಕಾರಣವೇನು? ಎರಡನೆಯದು ಜರ್ಮನ್ ಸಹಾಯದಿಂದ ಕಟ್ಟತಕ್ಕಂಥ ಹಣಕ್ಕೆ ಟೈಮ್ ಬಾಂಡ್ ಇರುವುದರಿಂದ ಅವರ ಆಕ್ಷೇಪಣೆ ಇಲ್ಲ ಅಥವಾ ಅದಕ್ಕೆ ಏನಾದರೂ ಪೆನಾಲ್ಟಿ ಕ್ಲಾಸ್ ಇಟ್ಟಿದ್ದಾರಾ? ಬೇನಾಮಿ ಗುತ್ತಿಗೆದಾರರ ಬಗ್ಗೆ ನಿಮಗೆ ಏನಾದರೂ ಗೊತ್ತಿದೆಯಾ? ಈ ವಿಳಂಬಕ್ಕೆ ಯಾರನ್ನು ಜವಾಬ್ದಾರಿ ಮಾಡುತ್ತೀರಿ? ಬೇನಾಮಿ ಗುತ್ತಿಗೆದಾರರ ಬಗ್ಗೆ ನಿಮಗೇನಾದರೂ ಗೊತ್ತಿದೆಯೇ? ಈ ವಿಳಂಬಕ್ಕೆ ಯಾರನ್ನು ಜವಾಬ್ದಾರರನ್ನಾಗಿ ಮಾಡುತ್ತೀರಿ?

ಶ್ರೀ ಚಲುವರಾಯಸ್ವಾಮಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಕಾನೂನು ಪ್ರಕಾರ ಕಾಂಟ್ರ್ಯಾಕ್ಟ್‌ನ್ನು ಈಗ ಒಬ್ಬರಿಗೆ ವಹಿಸಲಾಗಿದೆ. ಆದರೆ ಬೇರೆಯವರು ಯಾರು ಮಾಡುತ್ತಾರೆ ಎನ್ನುವುದರ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ. ಯಾರಿಗೆ ನಾವು ಗುತ್ತಿಗೆಯನ್ನು ನಾವು ವಹಿಸಿರುತ್ತೇವೆ ಟ್ರಾನ್ಸ್

ಫೆರನ್ಸಿ ಆ್ಯಕ್ಟ್ ಪ್ರಕಾರ ಅವರು ಆ ಕಾರ್ಯವನ್ನು ನಿರ್ವಹಿಸತಕ್ಕಂಥದ್ದು. ಅವರ ಜವಾಬ್ದಾರಿಯೇ ಆಗಿರುತ್ತದೆ. ಆದರೆ ಮಧ್ಯೆ ಯಾರು ಕಂಟ್ರ್ಯಾಕ್ಟ್ ಮಾಡುತ್ತಿದ್ದರೋ ಅವರ ಕಾರಣದಿಂದಲೇ ಸ್ಟಾಪ್ ಆಗಿತ್ತು ಎನ್ನುವುದರ ಬಗ್ಗೆ ಮಾಹಿತಿ ಇದೆ. ಈಗಾಗಲೇ ಪ್ರಾರಂಭ ಮಾಡಿ ಅಂತಿಮ ಘಟ್ಟದಲ್ಲಿ ಇರುವುದರಿಂದ ಈಗ ಯಾವುದೇ ಬದಲಾವಣೆ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಈಗ ಅವರು ಏನಾದರೂ ಮುಂದುವರೆಸದಿದ್ದರೆ, ಪ್ರಾರಂಭ ಮಾಡದೇ ಹೋಗಿದ್ದರೆ ತಕ್ಷಣ ಬದಲಾವಣೆ ಮಾಡಿ ಅವರಿಗೆ ಪೆನಾಲ್ಟಿ ಹಾಕಿ ಬೇರೆ ಏಜೆನ್ಸಿಯನ್ನು ಫಿಕ್ಸ್ ಮಾಡತಕ್ಕಂಥ ಒಂದು ಯೋಜನೆಯನ್ನು ಮಾಡಬೇಕಾಗಿತ್ತು. ಆದರೆ ಈಗ ಅವರು ಪ್ರಾರಂಭ ಮಾಡಿ ಇನ್ನು ಎರಡು ತಿಂಗಳೊಳಗೆ, ಈಗಾಗಲೇ 111 ಲಕ್ಷ ರೂಪಾಯಿ ಖರ್ಚಾಗಿದೆ. 227 ಲಕ್ಷ ರೂಪಾಯಿಗಳಿಗೆ ಅದು ಮಂಜೂರಾಗಿರ ತಕ್ಕಂಥದ್ದು. ಅದನ್ನು ನೋಡಿಕೊಳ್ಳತಕ್ಕಂಥ ನಮ್ಮ ಮುಖ್ಯ ಇಂಜಿನಿಯರ್‌ರವರು ಡಿಸೆಂಬರ್ ಒಳಗಡೆ ಮುಗಿಸತಕ್ಕಂಥ ಎಲ್ಲಾ ತರಹದ ಸಾಧ್ಯತೆ ಇದೆ. ಎನ್ನುವ ಮಾಹಿತಿಯನ್ನು ಕೊಟ್ಟಿದ್ದಾರೆ. ನಾನು ತ್ವರಿತವಾಗಿ ಏನಾದರೂ ಅದರ ಮಧ್ಯದಲ್ಲಿ ಅವರು ಯಾವುದೇ ತರಹದ ವ್ಯತ್ಯಾಸ ಆದರೆ ಅವರ ಬಗ್ಗೆ ರದ್ದು ಮಾಡುವುದಕ್ಕೇ ಆಗಲಿ ಅಥವಾ ಅವರಿಗೆ ಪೆನಾಲ್ಟಿ ಹಾಕುವುದೇ ಆಗಲಿ ಅಥವಾ ಅವರು ಏನಾದರೂ ಕ್ವಾಲಿಟಿಯಲ್ಲಿ ಅಥವಾ ಸದರ ಬಗ್ಗೆ ಇನ್ನೇನಾದರೂ ಮಿಸ್ಟೇಕ್ ಇದ್ದರೆ ಅವರ ಮೇಲೆ ಕ್ರಮ ಜರುಗಿಸುತ್ತೇವೆ. ಈಗೇನು ಅವರು ಪ್ರಾರಂಭ ಮಾಡಿದ್ದಾರೆ. ಅದರಲ್ಲಿ ಒಳ್ಳೆಯ ಕ್ವಾಲಿಟಿ ಕೆಲಸವನ್ನು ಆದಷ್ಟು ಬೇಗ ಮುಗಿಸುವುದಕ್ಕೆ ಅವರು ತೆಗೆದುಕೊಳ್ಳುವುದಾದರೆ ಆದಷ್ಟು ಮುಗಿಸಿ ಜನವರಿಯಲ್ಲಿ ಪ್ರಾರಂಭ ಮಾಡುವುದಕ್ಕೆ ಶಾಸಕರಿಗೆ ಅನುಮತಿಯನ್ನು ಕೊಡುವ ಬಗ್ಗೆ ಅವರಿಗೆ ಪ್ರಾರಂಭ ಮಾಡುವುದಕ್ಕೆ ಅಷ್ಟರೊಳಗೆ ಕ್ಲಿಯರ್ ಮಾಡುತ್ತೇವೆ.

ಶ್ರೀ ಬಿ.ಆರ್. ಪಾಟೀಲ್: ಮಾನ್ಯ ಸಚಿವರೆ, ಈ ವಿಚಾರದಲ್ಲಿ ತಮ್ಮದು ಸ್ಪಷ್ಟತೆ ಬರಲಿ. ಈಗ ಜರ್ಮನ್ ಸಹಾಯದಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಹಣವನ್ನು ಪಡೆದು ಆಸ್ಪತ್ರೆಯನ್ನು ಕಟ್ಟುತ್ತಿದ್ದೀರಿ. ಅವರು ಏನಾದರೂ ಟೈಮ್ ಬಾಂಡ್ ಹಾಕಿದ್ದಾರೋ ಅಥವಾ ಇಲ್ಲವೋ ಅಥವಾ ಪೆನಾಲ್ಟಿ ಕ್ಲಾಸ್‌ಗೆ ಏನಾದರೂ ಅವಕಾಶವಿದೆಯೋ, ಇಲ್ಲವೋ? ಆ ಮೇಲೆ ಈ ಕಾಂಟ್ರ್ಯಾಕ್ಟ್ ರದ್ದಾಗುವ ಹಂತಕ್ಕೆ ಹೋಗಿತ್ತು. ಅದನ್ನು ಮತ್ತೆ ಏಕೆ ಪುನರ್ ಪರಿಶೀಲನೆ ಮಾಡಿ ಅವರಿಗೇ ಅವಕಾಶ ಕೊಟ್ಟಿದ್ದೀರಿ? ದಯಮಾಡಿ ಇವುಗಳ ಬಗ್ಗೆ ಸ್ಪಷ್ಟವಾಗಿ ತಾವು ಹೇಳಬೇಕು.

ಶ್ರೀ ಚಲುವರಾಯಸ್ವಾಮಿ: ಯಾವುದೇ ಕಾಂಟ್ರ್ಯಾಕ್ಟ್ ಕೆಲಸ ನಿಲ್ಲಿಸಿ ಪ್ರಾರಂಭ ಮಾಡದೇ ಇದ್ದರೆ ಆಟೋಮ್ಯಾಟಿಕ್ ಆಗಿ ಅದನ್ನು ರದ್ದು ಮಾಡಬೇಕಾಗುತ್ತದೆ. ಮತ್ತು ಪೆನಾಲ್ಟಿಯನ್ನು ಇಂಪೋಸ್ ಮಾಡಬೇಕಾಗುತ್ತದೆ. ಆದರೆ ಕೆಲಸ ಪ್ರಾರಂಭ ಮಾಡಿರುವುದರಿಂದ ಆ ರೀತಿ ಬರುವುದಿಲ್ಲ. ಆದರೆ ಯಾವುದೇ ಕೆಲಸ ಅದು ಜರ್ಮನ್ ಹೆಡ್ಡಾಗಿರಬಹುದು. ಅಥವಾ ರಾಜ್ಯದ ಹೆಡ್ ಆಗಿರಬಹುದು ಅಥವಾ ಕೇಂದ್ರದ ಹೆಡ್‌ದ್ದಾಗಿರಬಹುದು. ಆ ಕೆಲಸವನ್ನು ಸರಿಯಾದ ರೀತಿಯಲ್ಲಿ ಕೊಟ್ಟ ಕಾಲಾವಕಾಶದಲ್ಲಿ ಕೆಲಸ ಮಾಡದೇ ಇದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಹಣಕಾಸಿನ ಕೊರತೆ ಇಲ್ಲದೇ ಇರುವುದರಿಂದ ಅವರು ಈಗ ಪ್ರಾರಂಭ ಮಾಡಿದ್ದಾರೆ. ಪ್ರಾರಂಭ ಮಾಡಿ ನಿಯರ್ ಕಂಪ್ಲಿಶನ್ ಇರುವುದರಿಂದ ದಯಮಾಡಿ ಆ ಒಂದು ಪ್ರಶ್ನೆ ಉದ್ಭವವಾಗುವುದಿಲ್ಲ. ಯಾವುದಾದರೂ ಅವರಿಗೆ ಅದರ ಬಗ್ಗೆ ಪರ್ಟಿಕ್ಯೂಲರ್ ಆಗಿ ನನಗೆ ಏನಾದರೂ...

ಶ್ರೀ ಬಿ.ಆರ್. ಪಾಟೀಲ್: ನನ್ನ ಪ್ರಶ್ನೆಗೆ ನೇರವಾಗಿ ಉತ್ತರ ಹೇಳಿ. ಕಾಂಟ್ರ್ಯಾಕ್ಟ್‌ದಾರರನ್ನು ರೀಸೆಂಟ್ ಮಾಡುವ ಹಂತಕ್ಕೆ ಹೋಗಿತ್ತು. ಹೀಗಿರುವಾಗ ಮತ್ತೆ ಅವರಿಗೆ ಮುಂದುವರಿಸಿರುವುದು ಏಕೆ?

ಶ್ರೀ ಚಲುವರಾಯಸ್ವಾಮಿ: ನಾನು ಈಗಾಗಲೇ ಹೇಳಿದ್ದೇನೆ ರಿಜಕ್ಟ್ ಮಾಡುವ ಹಂತಕ್ಕೂ ಮುಂದೆಯೇ ಅವರು ಅಂತಿಮವಾಗಿ ಕೆಲಸವನ್ನು ಪ್ರಾರಂಭ ಮಾಡಿದ್ದಾರೆಯಾದ್ದ ಕಾರಣ ರಿಜೆಕ್ಟ್ ಮಾಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಈಗೇನು ಕೆಲಸ ಮುಗಿಯಬೇಕು ಅದು ಸರಿಯಾದ ಕಾಲದಲ್ಲಿ ಮುಗಿಯದಿದ್ದರೆ, ವಿಳಂಬ ಮಾಡಿದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಏನು ಅವಕಾಶವಿದೆಯೋ ಆ ಪ್ರಕಾರ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ. ಬಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಆ ಕಾಂಟ್ರ್ಯಾಕ್ಟರನ್ನೇ ಏಕೆ ಮುಂದುವರಿಸಿದರು ಎಂಬುದಕ್ಕೆ ಉತ್ತರ ಬರಲಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರು ಆಗಲೇ ಹೇಳಿದರಲ್ಲ ಉತ್ತರ. ಪದೇ ಪದೇ ಅದನ್ನೇ ಕೇಳಿದರೆ ಹೇಗೆ? ಈಗ ಅದನ್ನು ಮುಕ್ತಾಯ ಮಾಡಿದ್ದೇನೆ. ವೈಜನಾಥ ಪಾಟೀಲರೆ ತಾವು ಮಾತನಾಡಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಗಳ ಮಂಡನೆ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ 13–07–2005ರ 29ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 175 ಪ್ರಶ್ನೆಗಳ ಪೈಕಿ 143 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.